ಶಿರಹಟ್ಟಿಯಲ್ಲಿ ಗುಮಾಸ್ತರಾಗಿದ್ದರು. ಸರ್ಕಾರಿ ನೌಕರಿಗೆ ಭಾರೀ ಬೆಲೆಯಿದ್ದ ಕಾಲವದು. ಆದರೆ ಇದ್ದು ಸುಖ ಕಾಣಲಾಗಲಿಲ್ಲ. ಐದು ಮಕ್ಕಳನ್ನು ಧರ್ಮಪತ್ನಿ ಅನಸಕ್ಕ ಅರ್ಥಾತ್ ಅನಸೂಯಾಳ ಉಡಿಯಲ್ಲಿರಿಸಿ ಯಾವುದೋ ಕಾಯಿಲೆಯೊಂದಿಗೆ ಸೆಣಸಾಡಲಾರದೇ ಸೋತು ಮಣ್ಣಾದರು. ಅದೇ ಹತ್ತನೇ ತರಗತಿಯ ಪರೀಕ್ಷೆ ಮುಗಿಸಿದ ಹಿರಿಯ ಮಗ ಶ್ರೀಪಾದ ತಂದೆಯ ಚಿತೆಗೆ ಅಗ್ನಿಸ್ಪರ್ಶ ಮಾಡಿದಂತೆ ಓದಿಗೂ ತಿಲಾಂಜಲಿಯನ್ನಿತ್ತ. ಯಾರ ಸಹಾಯದಿಂದಲೋ ದೊರಕಿದ ಗುಮಾಸ್ತೆಗಿರಿಗೆ ಶರಣಾದ. ಅವನ ಹಿಂದೆ ಸಾಲಾಗಿ ದತ್ತಾತ್ರೇಯ, ಸುವರ್ಣಾ, ಶಾಲಿನಿ, ಶ್ರೀಧರ... ಇನ್ನೂ ಓದುತ್ತಿದ್ದರು. ಶಿರಹಟ್ಟಿಯಲ್ಲಿ ಇದ್ದುದೆಲ್ಲ ಮಾರಿದ್ದಾಯಿತು. ಉಳಿದದ್ದು ಗದಗದ ಮನೆಯೊಂದೇ. ಮುಂದೆ...

ಅಂತೂ ಇಂತೂ ಅತ್ತಿತ್ತ ಹೊರಳುತ್ತ ಬದುಕು ಮತ್ತೆ ಬಂಡಿಯೇರಿತು. ಯಾರಿಗೂ ನಿಲ್ಲದ ಕಾಲಚಕ್ರ ಸರಾಗವಾಗಿ ಉರುಳತೊಡಗಿತು. ದತ್ತಾತ್ರೇಯ ಕಾಲೇಜು ಸೇರಿ ಬಿ.ಎ. ಮಾಡಿದ. ಹಂಗಾಮಿ ಶಿಕ್ಷಕನ ಉದ್ಯೋಗ ದೊರಕಿತು. ಸುವರ್ಣಾ ಹತ್ತನೇ ತರಗತಿ ಮುಗಿಸಿ ಕಾಲೇಜಿಗೆ ಹೋಗಲು ಆಸೆಪಟ್ಟರೂ ಅನಸಕ್ಕ ಅವಳ ಮದುವೆಯ ತುರಾತುರಿಯಲ್ಲಿದ್ದಳು. ಲೋಕೋಪಯೋಗಿ ಇಲಾಖೆಯಲ್ಲಿ ಗುಮಾಸ್ತನಾಗಿದ್ದ ಶಿರಹಟ್ಟಿಯ ಹುಡುಗನನ್ನು ನೋಡಿ ವಾಲಗ ಊದಿಸಿಯೇಬಿಟ್ಟಳು. ಮನೆಯಲ್ಲಿ ಮೊದಲ ಮದುವೆ. ಪತಿಯನ್ನು ನೆನೆದು ಕಣ್ಣೀರಿಡುತ್ತ ತನ್ನ ಚಿನ್ನದಲ್ಲಿಯೇ ಹತ್ತು ತೊಲ ಹಾಕಿ ಚೆನ್ನಾಗಿ ಮದುವೆ ಮಾಡಿದಳು. ಒಂದಷ್ಟು ಸಾಲ ಶ್ರೀಪಾದನ ಹೆಗಲೇರಿತ್ತು. ನಂತರ ಶಾಲಿನಿಯ ಸರದಿ. ಎರಡು ವರ್ಷ ಕಾಲೇಜಿಗೆ ಮಣ್ಣು ಹೊತ್ತಿದ್ದೇ ಬಂತು. ಪರೀಕ್ಷೆ ಕಟ್ಟುವ ಮೊದಲೇ ಸಂಬಂಧ ಕೂಡಿ ಬಂದಿತ್ತು. “ಭೋಲೊ ಮನಿತನ, ಬಿಡೋ ಹಂಗಿಲ್ಲ” ಎನ್ನುತ್ತ ಹೊಂದಿಸಿಯೇ ಸೈ ಎಂದಳು ಅನಸಕ್ಕ. ಯಥಾಪ್ರಕಾರ ತನ್ನ ಮೈಮೇಲಿನ ಚಿನ್ನವನ್ನೇ ಹಾಕಿ ಮದುವೆ ಜೋರಾಗಿಯೇ ಮಾಡಿದಳು. ಶ್ರೀಪಾದನ ತಲೆಯ ಮೇಲೆ ಇನ್ನಷ್ಟು ಸಾಲ ಏರಿ ಕುಳಿತಿತು. ಕಾರಣ ದತ್ತಾತ್ರೇಯನ ಉದ್ಯೋಗ ಕಾಯಮ್ಮಾಗಿರಲಿಲ್ಲ. ಶ್ರೀಧರ ಇನ್ನೂ ಓದುತ್ತಿದ್ದ. ಸಾಲದ ಹೊರೆಯ ಮಧ್ಯೆ ತನ್ನ ಮದುವೆ ಬೇಡವೆಂದು ಪಟ್ಟು ಹಿಡಿದವನಿಗೆ ಅನಸಕ್ಕ, “ಸಾಲ ಮುಂದ ತೀರೇ ತೀರ್ತದ. ಭೋಲೊ ಮನಿತನದ ಹುಡುಗಿ. ಗಪ್ಪ ಮದವಿ ಮಾಡ್ಕೊ” ಎಂದು ಆಜ್ಞೆ ಮಾಡಿದಳು. ಅದ್ದೂರಿಯಾಗಿ ಮದುವೆಯಾಗಿ ವೇದಾ ವಧುವಾಗಿ ಬಂದಳು. ಎಲ್ಲದರ ಮಧ್ಯೆ ಒದ್ದಾಡುತ್ತಲೇ ಶ್ರೀಪಾದ ಸಂಜೆ ಕಾಲೇಜಿನಲ್ಲಿ ಬಿ.ಎ. ಮುಗಿಸಿದ. ಡಿಪಾರ್ಟಮೆಂಟಲ್ ಪರೀಕ್ಷೆಗಳನ್ನು ಬರೆದು ಪಾಸಾದ. ದತ್ತಾತ್ರೇಯನಿಗೆ ಶಿಕ್ಷಕನ ಉದ್ಯೋಗ ಕಾಯಮ್ಮಾದರೆ ಶ್ರೀಧರನಿಗೆ ಬ್ಯಾಂಕಿನಲ್ಲಿ ಕೆಲಸವಾಯಿತು. ತಂಗಿಯರಿಗಾಗಿ ಮಾಡಿದ ಸಾಲವನ್ನು ಹಂಚಿಕೊಳ್ಳಿರೆಂದು ಶ್ರೀಪಾದನಿಗೆ ಕೇಳಲಾಗಲಿಲ್ಲ. ಅವರೂ ತಿಳಿದುಕೊಳ್ಳಲಿಲ್ಲ. ಅನಸಕ್ಕನೂ ಹೇಳಲಿಲ್ಲ. ಹಾಗೂ ಹೀಗೂ ಏಗುತ್ತ ಎಲ್ಲರ ಮುಖಂಡನಾಗಿ ಸಂಸಾರನೌಕೆಯ ಚುಕ್ಕಾಣಿ ಹಿಡಿದ.

ದತ್ತೋಪಾಸನೆ ವಂಶಪಾರಂಪರ್ಯವಾಗಿ ನಡೆದು ಬಂದಿತ್ತು. ತಾತ ಮುತ್ತಾತಂದಿರೆಲ್ಲ ದತ್ತಪ್ಪನಿಗೆ ಶಿರ ಬಾಗಿದವರೇ. ನಸುಗೆಂಪು ಸಾಲಿಗ್ರಾಮ ಶಿಲೆಯಲ್ಲಿ ಕೆತ್ತಿದ ಗೇಣುದ್ದದ ದತ್ತಾತ್ರೇಯನ ಮೂರ್ತಿ ಮನೆಯಲ್ಲಿ ವಿರಾಜಮಾನವಾಗಿತ್ತು. ಮಾರ್ತಾಂಡ ಭಟ್ಟರ ತಂದೆಯ ಕಾಲದಿಂದಲೇ ಚಿನ್ನದ ಸರವೊಂದು ದತ್ತಪ್ಪನ ಕೊರಳಲ್ಲಿ ಶೋಭಾಯಮಾನವಾಗಿತ್ತು. ಎಂತಹ ಕಷ್ಟಕಾಲದಲ್ಲೂ ಅದನ್ನು ಬಳಸಿಕೊಂಡಿರಲಿಲ್ಲ. ಬಿಟ್ಟರೆ ಸಾಲಿಗ್ರಾಮಗಳಿದ್ದವು. ಪುಟ್ಟದಾಗಿ ಗಣೇಶ, ಬೆಳ್ಳಿಯ ಈಶ್ವರಲಿಂಗ, ಅನ್ನಪೂರ್ಣೇಶ್ವರಿ, ಕೃಷ್ಣ, ಲಕ್ಷ್ಮೀನಾರಾಯಣ ಮುಂತಾದ